ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

ಸಿ.ಸಿ. ಸಂಖ್ಯೆ: **1411/2024**

ಪಿರ್ಯಾದಿ : ಶ್ರೀ ಸುಭಾಷ್‌ಚಂದ್ರ ಹೆಚ್.ಆರ್.,
ವಯಸ್ಸು ಸುಮಾರು 50 ವರ್ಷ,
ಬಿನ್ ಹೆಚ್.ಎಸ್. ರಾಮನಾಥ್,
ವಾಸ: ಹಿಂಚಳಿ, ಕೆ.ಕೆಳಗೂರು ಗ್ರಾಮ,
ಕಳಸ ಅಂಚೆ ಮತ್ತು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಆರೋಪಿ : ಶ್ರೀ ಉಮೇಶ್,
ವಯಸ್ಸು ಸುಮಾರು 49 ವರ್ಷ,
ಬಿನ್ ರಾಮಪ್ಪ ಪೂಜಾರಿ, ವಾಸ: ಕೊರೆ,
ಹಿರೆಬೈಲು, ಇಡಕಣಿ ಗ್ರಾಮ, ಕಳಸ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ಆಪಾದನೆಯ ಸಾರಾಂಶ

ಶ್ರೀ ವಿಶ್ವನಾಥ್ ಎ., C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ:-

ಆರೋಪಿಯಾದ ನೀವು ನಿಮ್ಮ ಕುಟುಂಬ ನಿರ್ವಹಣೆಗಳಿಗೋಸ್ಕರ ಪಿರ್ಯಾದುದಾರರಿಂದ 2,50,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕಳಸ ಶಾಖೆಯ ಚೆಕ್ ಸಂಖ್ಯೆ: 720533, ದಿನಾಂಕ 17.04.2024, ರೂ.2,50,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಕರ್ನಾಟಕ ಗ್ರಾಮೀಣ ಬ್ಯಾಂಕ್, ಕಳಸ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ, "Drawer's signature differs from specimen filed in this office" ಮತ್ತು "Funds Insufficient" ಎಂದು ಹಿಂಬರಹ ನೀಡಿರುತ್ತಾರೆ. ಕಾರಣ, ಫಿರ್ಯಾದಿಯು ದಿನಾಂಕ 29.06.2024 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರ: 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರ:

ಪ್ರ: 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರ:

*(*ದಿನಾಂಕ 24.03.2025 ರಂದು ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ*)*

**Sd/-**

ಮೂಡಿಗೆರೆ
ದಿನಾಂಕ: 24.03.2025

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮೂಡಿಗೆರೆ.